ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಈ ಪ್ರಕರಣಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಜಂಟಿ ಆಯುಕ್ತರ ವರ್ಗಾವಣೆಗೂ ಈ ಪ್ರಕರಣಗಳ ತನಿಖೆ ಮತ್ತು ವಿಲೇವಾರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಜಂಟೀ ಆಯುಕ್ತರು ಈ ಪ್ರಕರಣಗಳಲ್ಲಿಯ ವಿಲೇವಾರಿಯಲ್ಲಿ ಯಾವುದೇ ರೀತಿಯ ಕಾನೂನು ರೀತಿಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ (ಮೇಲ್ವಿಚಾರಣೆ ಹೊರತು ಪಡಿಸಿ).

ಇ) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನೋಟೀಸ್‌ಗಳು ಜಾರಿಯಾಗಿದ್ದು ಆದೇಶ ಹೊರಡಿಸುವುದು ಮಾತ್ರ ಬಾಕಿ ಇದೆ.

ಈ) ಜಂಟಿ ಆಯುಕ್ತರ ವರ್ಗಾವಣೆ ಆಗಿರುವುದರಿಂದ ಸರ್ಕಾರಕ್ಕೆ ನ್ಯಾಯ ರೀತಿಯಲ್ಲಿ ಸಂದಾಯವಾಗಬೇಕಾದ ತೆರಿಗೆಯು ವಂಚಕರ ಪಾಲಾಗುತ್ತಿರುವುದಿಲ್ಲ. ಈ ತನಿಖೆಯಿಂದ ಜಪ್ತಿ ಮಾಡಿದ ದಾಖಲಾತಿಗಳನ್ನು ಪರಿಶೀಲಿಸಿ ಆದೇಶ ಹೊರಡಿಸಬೇಕಾದ ಆ ಕ್ಷೇತ್ರ ವ್ಯಾಪ್ತಿಯ ಅಧಿಕಾರಿಗಳಾದ ವಾಣಿಜ್ಯತೆರಿಗೆ ಉಪ ಆಯುಕ್ತರು, ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು ವರ್ಗಾವಣೆ ಹೊಂದಿರುವುದಿಲ್ಲ. ಆದ್ದರಿಂದ ಸದರಿ ಅಧಿಕಾರಿಗಳಿಗೆ ಕಾನೂನಿನ ರೀತಿ ಶೀಘ್ರ ಕ್ರಮ ಕೈಗೊಂಡು ತೆರಿಗೆ ವಸೂಲಾತಿ ಮಾಡುವಂತೆ ಸೂಚಿಸಲಾಗಿದೆ.

ಉ) ಈ ನಿಟ್ಟಿನಲ್ಲಿ ತೆರಿಗೆ ಸಂಗ್ರಹಕ್ಕೆ ಕುಂದು ಬಂದಿರುವುದಿಲ್ಲ. ಹಾಗೂ ಜಪ್ತು ಮಾಡಿಕೊಳ್ಳಲಾದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಹೆಚ್ಚು ಮಾರಾಟ ತೆರಿಗೆಯನ್ನು ಸಂಗ್ರಹಿಸಲು ಕರನಿರ್ಧಾರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ಸೂಚನೆಗಳನ್ನು ನೀಡಲಾಗಿದೆ.

ಮಂಗಳೂರು ವಾಣಿಜ್ಯ ತೆರಿಗೆ ವಿಭಾಗದಲ್ಲಿ ಅಡಿಕೆ ಅಕ್ರಮ ಸಾಗಾಣಿಕೆ.

137 (361)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ವಾಣಿಜ್ಯ ತೆರಿಗೆ ವಿಭಾಗದಲ್ಲಿ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ 1957, ನಿಯಮ 28ಬಿ, 28ಸಿ ಮತ್ತು ಅಧಿನಿಯಮ 54ಎ, 54ಬಿ ಮತ್ತು 54 ಸಿ ಅನ್ವಷ್ಠಾನ ಕೈಗೊಳ್ಳದೆ ಅಕ್ರಮವಾಗಿ ಲೆಕ್ಕಕ್ಕೆ ಸಿಗದ ಹಾಗೆ ಅಡಿಕೆ ಇತ್ಯಾದಿ ವಸ್ತುಗಳ

ಸಾಗಣೆಯಾಗುತ್ತಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲಿ ಸಂಬಂಧಪಟ್ಟವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಸಾಗಾಣಿಕೆಯಿಂದ ಸೋರಿ ಹೋದ ರಾಜಸ್ವ ವಸೂಲಿಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957ರ ಕಲಂ 28-ಬಿ, 28-ಸಿ, ಮತ್ತು ನಿಯಮ 54-ಎ, 54-ಬಿ ಮತ್ತು 54-ಸಿ ಅಡಿಯಲ್ಲಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗಿದ್ದು, ಅವುಗಳನ್ನು ಅನುಷ್ಠಾನಕ್ಕೆ ತರಲಾಗಿದೆ. 12-8-99ರಂದು ಮಂಗಳೂರು ಪುತ್ತೂರು ಹಾಗೂ ಉಡುಪಿಗಳಲ್ಲಿನ 8 ಸರಕು ಸಾಗಾಣಿಕೆದಾರರ ಗೋದಾಮುಗಳ ತಪಾಸಣೆ ಮಾಡಿ ಅಂದಾಜು ರೂ. 151.36 ಕೋಟಿಯಷ್ಟು ಬಚ್ಚಿಟ್ಟ ವಹಿವಾಟನ್ನು ಕಂಡು ಹಿಡಿಯಲಾಗಿದ್ದು, ಅದರ ಮೇಲೆ ಅಂದಾಜು ರೂ.6.59 ಕೋಟಿಯಷ್ಟು ತೆರಿಗೆ ಬಾಧ್ಯತೆ ಅಂದಾಜು ಮಾಡಲಾಗಿದೆ.

ಆ) ಮಂಗಳೂರಿನ ವಾಣಿಜ್ಯ ತೆರಿಗೆ ಆಡಳಿತದವರು 8 ಸರಕು ಸಾಗಾಣಿಕೆದಾರರ ಗೋದಾಮುಗಳನ್ನು ತಪಾಸಣೆ ಮಾಡಿ ಬಚ್ಚಿಟ್ಟ ವಹಿವಾಟು ಮತ್ತು ತೆರಿಗೆಯನ್ನು ಪತ್ತೆ ಹಚ್ಚಿದ್ದಾರೆ. ಈ ಎಲ್ಲ ಪ್ರಕರಣಗಳಲ್ಲಿ ಕ.ಮಾ.ತೆ.ಕಾಯ್ದೆ, 1957ರ ಅಡಿಯಲ್ಲಿ ತೆರಿಗೆ ತಪ್ಪಿಸಿದ್ದವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದ್ದು, ಅವರಿಗೆ ಸೂಚನಾ ಪತ್ರಗಳನ್ನು ನೀಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳೆಲ್ಲರಿಗೂ ಸದರಿ ಪ್ರಕರಣಗಳ ಪರಿಶೀಲನೆಗಳನ್ನು ಬೇಗನೆ ಮುಗಿಸುವಂತೆ ನಿರ್ದೇಶಿಸಲಾಗಿದೆ.

ಮಂಡ್ಯ ಜಿಲ್ಲೆಯ ಪೋಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ.

141 (136)

ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಪೋಲೀಸ್ ಠಾಣೆಗಳಿವೆ?

2. ಮಂಡ್ಯ ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಇರುವುದನ್ನು ಸರ್ಕಾರ ಮನಗಂಡಿದೆಯೇ?

3. ಹಾಗಿದ್ದಲ್ಲಿ, ಮಂಡ್ಯ ಜಿಲ್ಲೆಯಲ್ಲಿನ ಪೋಲೀಸ್ ಸಿಬ್ಬಂದಿ ಕೊರತೆಯನ್ನು